ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**ಸಂಕೇತ ಸಂಖ್ಯೆ : 97-K**
**Code No. : 97-K**

**D**

**CCE PF**
**CCE PR**
**Revised & Unrevised**

**Question Paper Serial No. 10**

ಇಲ್ಲಿಂದ ಕತ್ತರಿಸಿ

# ವಿಷಯ : ರಾಜ್ಯಶಾಸ್ತ್ರ

# Subject : POLITICAL SCIENCE

**(ಕನ್ನಡ ಭಾಷಾಂತರ / Kannada Version)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh & Private Repeater)**

ದಿನಾಂಕ : 30. 03. 2020 ] [ Date : 30. 03. 2020

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

***ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**Tear here**

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

1. ಭಾರತದ ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರು

   (A) ಡಾ. ಬಾಬು ರಾಜೇಂದ್ರ ಪ್ರಸಾದ್

   (B) ಜವಾಹರಲಾಲ್ ನೆಹರೂ

   (C) ಸರ್ದಾರ್ ವಲ್ಲಭಭಾಯಿ ಪಟೇಲ್

   (D) ಡಾ. ಬಿ.ಆರ್. ಅಂಬೇಡ್ಕರ್

2. 'ಪ್ರಸ್ತಾವನೆಯು ಸಂವಿಧಾನದ ಯೋಗ್ಯತೆಯನ್ನು ಅಳೆಯಲು ಇರುವ ಒಂದು ಅಳತೆಗೋಲು' ಎಂದವರು

   (A) ಠಾಕೂರ್‌ದಾಸ್ ಭಾರ್ಗವ

   (B) ಸಚ್ಚಿದಾನಂದ ಸಿನ್ಹ

   (C) ಬಾಲಗಂಗಾಧರ್ ತಿಲಕ್

   (D) ಕೆ.ಎಂ. ಮುನ್ಷಿ

3. ಕರ್ನಾಟಕ ಸರ್ಕಾರವು ಶಿಕ್ಷಣ ಹಕ್ಕು ಕಾಯ್ದೆಯನ್ನು ಅನುಷ್ಠಾನಗೊಳಿಸಿದ ವರ್ಷ

   (A) 2011

   (B) 2012

   (C) 2013

   (D) 2014

4. ಎಂ.ಸಿ. ಛಾಗ್ಲಾ (ಛಾವ್ಲ)ರವರ ಪ್ರಕಾರ ಒಂದು ವೇಳೆ ರಾಜ್ಯನೀತಿ ನಿರ್ದೇಶಕ ತತ್ವಗಳು ಅಕ್ಷರಶಃ ಅನುಷ್ಠಾನಗೊಳಿಸಿದ್ದೇ ಆದರೆ ಭಾರತವು

   (A) ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುತ್ತದೆ

   (B) ಭೂಮಿಯ ಮೇಲಿನ ಸ್ವರ್ಗವಾಗುತ್ತದೆ

   (C) ಸುಖಿ ರಾಷ್ಟ್ರವಾಗುತ್ತದು

   (D) ಸಾರ್ವಭೌಮ ರಾಷ್ಟ್ರವಾಗುತ್ತದೆ

5. ಭಾರತದ ರಾಷ್ಟ್ರಪತಿಯವರ ಚುನಾವಣಾ ವಿಧಾನವನ್ನು ಎರವಲು ಪಡೆದುಕೊಂಡಿರುವುದು

(A) ಅಮೆರಿಕಾದ ಸಂವಿಧಾನದಿಂದ

(B) ಇಂಗ್ಲೆಂಡಿನ ಸಂವಿಧಾನದಿಂದ

(C) ಐರ್ಲೆಂಡ್‌ನ ಸಂವಿಧಾನದಿಂದ

(D) ದಕ್ಷಿಣ ಆಫ್ರಿಕಾದ ಸಂವಿಧಾನದಿಂದ

6. ಬ್ರಿಟನ್ ದೇಶದ ಕೆಳಮನೆ

(A) ಲೋಕಸಭೆ

(B) ಫೆಡರಲ್ ಅಸೆಂಬ್ಲಿ

(C) ಸಾಮಾನ್ಯರ ಸದನ

(D) ಪ್ರತಿನಿಧಿಗಳ ಸದನ

7. ಸರ್ವೋಚ್ಛ ನ್ಯಾಯಾಲಯದ ಕೇಂದ್ರ ಕಛೇರಿ ಇರುವ ಸ್ಥಳ

(A) ಬೆಂಗಳೂರು

(B) ಕೊಲ್ಕತ್ತಾ

(C) ನವದೆಹಲಿ

(D) ಚೆನ್ನೈ

8. ರಾಜ್ಯದ ಹಣಕಾಸು ಮಸೂದೆಯನ್ನು ಮೊದಲು ಮಂಡಿಸಬೇಕಾದ ಸದನ

(A) ಲೋಕಸಭೆ

(B) ರಾಜ್ಯಸಭೆ

(C) ವಿಧಾನಸಭೆ

(D) ವಿಧಾನಪರಿಷತ್ತು

9. ಒಂದು ರಾಜ್ಯದ ವಿಧಾನಸಭೆಯ ಒಟ್ಟು ಸದಸ್ಯರ ಸಂಖ್ಯೆ 150 ಆಗಿದ್ದರೆ ಆ ರಾಜ್ಯದ ವಿಧಾನಪರಿಷತ್ತಿನ ಸದಸ್ಯರ ಸಂಖ್ಯೆ

(A) 60

(B) 300

(C) 150

(D) 50

10. ಋಗ್ವೇದ ಕಾಲದ ಸಭೆಗಳು ಇವುಗಳಿಗೆ ಸಂಬಂಧಿಸಿದ್ದು

(A) ನಗರಾಡಳಿತಕ್ಕೆ

(B) ಹಳ್ಳಿಗಳ ಸ್ವಯಂ ಆಡಳಿತಕ್ಕೆ

(C) ಮದುವೆ ಸಮಾರಂಭಕ್ಕೆ

(D) ಯುದ್ಧ ಸಂಧಿಗಳಿಗೆ

II. 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :**

5 × 1 = 5

| ***A* ಪಟ್ಟಿ** | ***B* ಪಟ್ಟಿ** |
|---|---|
| (A) ರಾಷ್ಟ್ರಪತಿ | (i) ಸರ್ವೋಚ್ಚ ನ್ಯಾಯಾಲಯದ ಮುಖ್ಯಸ್ಥರು |
| (B) ಉಪರಾಷ್ಟ್ರಪತಿ | (ii) ರಾಜ್ಯದ ಮುಖ್ಯಸ್ಥರು |
| (C) ಪ್ರಧಾನ ಮಂತ್ರಿ | (iii) ರಾಜ್ಯಸಭೆಯ ಮುಖ್ಯಸ್ಥರು |
| (D) ಸಭಾಪತಿ | (iv) ರಾಷ್ಟ್ರದ ಮುಖ್ಯಸ್ಥರು |
| (E) ರಾಜ್ಯಪಾಲರು | (v) ಲೋಕಸಭೆಯ ಮುಖ್ಯಸ್ಥರು |
| | (vi) ಕೇಂದ್ರ ಸರ್ಕಾರದ ಮುಖ್ಯಸ್ಥರು |
| | (vii) ವಿಧಾನ ಪರಿಷತ್‌ನ ಉಪಾಧ್ಯಕ್ಷರು |

III. **ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** 15 × 1 = 15

12. ಜೆಲ್ಲಿನೆಕ್‌ರವರ ಪ್ರಕಾರ ಸಂವಿಧಾನವಿಲ್ಲದ ರಾಜ್ಯ ಎಂದರೇನು ?

13. ಪ್ರಜಾಪ್ರಭುತ್ವವನ್ನು ವ್ಯಾಖ್ಯಾನಿಸಿ.

14. ಸ್ವಾತಂತ್ರ್ಯ ಮತ್ತು ಸಮಾನತೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಏಕೆ ?

15. ಗ್ರಾನ್‌ವಿಲ್ಲೇ ಆಸ್ಟಿನ್‌ರವರ ಪ್ರಕಾರ ರಾಜ್ಯನೀತಿ ನಿರ್ದೇಶಕ ತತ್ವಗಳೆಂದರೇನು ?

16. ಲೋಕಸಭೆಯನ್ನು ಯಾರು ವಿಸರ್ಜನೆ ಮಾಡುತ್ತಾರೆ ?

17. ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ಯಾರು ನೇಮಕ ಮಾಡುತ್ತಾರೆ ?

18. ಸರ್ವೋಚ್ಚ ನ್ಯಾಯಾಲಯದ ಸಲಹಾತ್ಮಕ ಅಧಿಕಾರವೇನು ?

19. ವಿಧಾನಮಂಡಲವು ಏನನ್ನು ಒಳಗೊಂಡಿದೆ ?

20. ಕರ್ನಾಟಕದ ಕೆಳಮನೆಯ ಸದಸ್ಯರ ಸಂಖ್ಯೆ ಎಷ್ಟು ?

21. ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಪದಚ್ಯುತಿಗೊಳಿಸುವ ವಿಧಾನ ಯಾವುದು ?

22. 226 ನೇ ವಿಧಿಯ ಮಹತ್ವವೇನು ?

23. 'ಸ್ಥಳೀಯ ಸರ್ಕಾರ ವ್ಯವಸ್ಥೆಯ ಪಿತಾಮಹ' ಯಾರು ?

24. 1959 ರಲ್ಲಿ ಪಂಚಾಯಿತಿ ರಾಜ್ಯ ವ್ಯವಸ್ಥೆಯನ್ನು ಎಲ್ಲಿ ಉದ್ಘಾಟಿಸಲಾಯಿತು ?

25. ಗ್ರಾಮ ಪಂಚಾಯಿತಿಯ ಉತ್ಪಾದನಾ ಸಮಿತಿಯ ಉದ್ದೇಶವೇನು ?

26. ಕೇಂದ್ರ ಲೋಕಸೇವಾ ಆಯೋಗದ ಸದಸ್ಯರ ಅಧಿಕಾರಾವಧಿ ಎಷ್ಟು ?

IV. **ಕೆಳಗಿನ ಪ್ರಶ್ನೆಗಳಿಗೆ *ಎರಡರಿಂದ ನಾಲ್ಕು* ವಾಕ್ಯಗಳಲ್ಲಿ ಉತ್ತರಿಸಿ :** 24 × 2 = 48

27. 1935 ರ ಕಾಯ್ದೆಯನ್ನು ಸಂವಿಧಾನ ಬೆಳವಣಿಗೆಯಲ್ಲಿ ಒಂದು ಮೈಲುಗಲ್ಲು ಎಂದು ಏಕೆ ಪರಿಗಣಿಸಲಾಗಿದೆ ?

28. ಜಾತ್ಯಾತೀತತೆಯ ತತ್ವಗಳಾವುವು ?

29. ಮೂಲಭೂತ ಹಕ್ಕುಗಳ ಗುಣಲಕ್ಷಣಗಳಾವುವು ?

30. ಪ್ರತಿಯೊಂದು ಪ್ರಜಾಪ್ರಭುತ್ವ ರಾಷ್ಟ್ರಕ್ಕೂ ಉದಾರವಾದಿ ತತ್ವಗಳ ಅವಶ್ಯಕತೆಯಿದೆ. ಸ್ಪಷ್ಟೀಕರಿಸಿ.

31. ಸಾಮಾಜಿಕ ನ್ಯಾಯ ಒದಗಿಸುವಲ್ಲಿ ಸಮಾಜವಾದಿ ತತ್ವಗಳ ಪಾತ್ರವನ್ನು ವಿವರಿಸಿ.

32. ರಾಜ್ಯಸಭೆಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳನ್ನು ತಿಳಿಸಿ.

33. ದಾಖಲೆಗಳ ನ್ಯಾಯಾಲಯವಾಗಿ ಸರ್ವೋಚ್ಛ ನ್ಯಾಯಾಲಯದ ಅಧಿಕಾರಗಳನ್ನು ಪಟ್ಟಿ ಮಾಡಿ.

34. ರಾಜ್ಯಪಾಲರ ಕಾರ್ಯಾಂಗೀಯ ಅಧಿಕಾರಗಳೇನು ?

35. ಒಂದು ರಾಜ್ಯದ ರಾಜ್ಯಪಾಲರನ್ನು ಹೇಗೆ ನೇಮಕ ಮಾಡಲಾಗುತ್ತದೆ ?

36. ವಿಧಾನ ಪರಿಷತ್ತಿನ ಹಣಕಾಸು ಅಧಿಕಾರಗಳನ್ನು ತಿಳಿಸಿ.

37. ಕಂದಾಯ ನ್ಯಾಯಾಲಯದ ಶ್ರೇಣಿಯನ್ನು ಬರೆಯಿರಿ.

38. ಗ್ರಾಹಕ ನ್ಯಾಯಾಲಯಗಳು ಗ್ರಾಹಕರಿಗೆ ಹೇಗೆ ಉಪಯುಕವಾಗಿವೆ ?

39. ಜಿಲ್ಲಾ ಪಂಚಾಯಿತಿಯ ಸದಸ್ಯರುಗಳು ಯಾರು ?

40. ಕೇಂದ್ರ ಲೋಕಸೇವಾ ಆಯೋಗದ ಸದಸ್ಯರನ್ನು ಹೇಗೆ ವಜಾಗೊಳಿಸಬಹುದು ?

41. 1909 ರ ಕಾಯ್ದೆಯು ಭಾರತದ ವಿಭಜನೆಗೆ ದಾರಿಯಾಯಿತು. ಹೇಗೆ ?

42. ಭಾರತದ ರಾಜಕೀಯ ಪದ್ಧತಿಯ ನಾಲ್ಕು ತಾತ್ವಿಕ ಸ್ಥಂಭಗಳಾವುವು ?

43. ಡಿ.ಡಿ. ಬಸುರವರ ಪ್ರಕಾರ ಮೂಲಭೂತ ಹಕ್ಕುಗಳೆಂದರೇನು ?

44. ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹೇಗೆ ಸಾಧಿಸಿವೆ ?

45. ಭಾರತದ ರಾಷ್ಟ್ರಪತಿಯಾಗಲು ಬೇಕಾಗಿರುವ ಅರ್ಹತೆಗಳೇನು ?

46. ರಾಷ್ಟ್ರಪತಿಯವರ ಕ್ಷಮಾದಾನದ ಅಧಿಕಾಂಗಳನ್ನು ತಿಳಿಸಿ.

47. ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರಿಗೆ ಇರುವಂತಹ ವಿನಾಯಿತಿಗಳೇನು ?

48. ರಾಜ್ಯಪಾಲರ ನ್ಯಾಯಿಕ ಅಧಿಕಾರಗಳೇನು ?

49. ವಿಧಾನ ಪರಿಷತ್ತಿನ ಸಭಾಧ್ಯಕ್ಷ ಮತ್ತು ಉಪಸಭಾಧ್ಯಕ್ಷರ ಕಾರ್ಯಗಳನ್ನು ಪಟ್ಟಿ ಮಾಡಿ.

50. ಜಂಟಿ ಲೋಕಸೇವಾ ಆಯೋಗ ಎಂದರೇನು ?

V. **ಕೆಳಗಿನ ಪ್ರಶ್ನೆಗಳಿಗೆ *ಮೂರರಿಂದ* ಆರು ವಾಕ್ಯಗಳಲ್ಲಿ ಉತ್ತರಿಸಿ :** 6 × 3 = 18

51. ಭಾರತ ಸಂವಿಧಾನದ ಪ್ರಧಾನ ಲಕ್ಷಣಗಳೇನು ?

52. ಭಾರತೀಯ ಸಂವಿಧಾನದಲ್ಲಿ ನೀಡಿರುವ ಮೂಲಭೂತ ಹಕ್ಕುಗಳನ್ನು ಹೆಸರಿಸಿ.

53. ಗಾಂಧಿವಾದವು ನಮ್ಮ ದೇಶದ ಸರ್ವತೋಮುಖ ಬೆಳವಣಿಗೆಯ ಗುರಿ ಹೊಂದಿತ್ತು. ಸ್ಪಷ್ಟೀಕರಿಸಿ.

54. ರಾಜ್ಯಸಭೆಯ ಶಾಸನೀಯ ಅಧಿಕಾರಗಳಾವುವು ?

55. 32 ನೇ ವಿಧಿಯನ್ನು 'ಸಂವಿಧಾನದ ಆತ್ಮ ಮತ್ತು ಹೃದಯವೆಂದು' ಏಕೆ ಕರೆಯುತ್ತಾರೆ ?

56. ರಾಜ್ಯ ಲೋಕಸೇವಾ ಆಯೋಗದ ಕಾರ್ಯಗಳನ್ನು ವಿವರಿಸಿ.

VI. **ಈ ಕೆಳಗಿನ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ :** 1 × 4 = 4

57. ಕೇಂದ್ರ ಸರ್ಕಾರವನ್ನು ಶಾಸಕಾಂಗವು ಹೇಗೆ ನಿಯಂತ್ರಿಸುತ್ತವೆ. ವಿವರಿಸಿ.